KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---

**Offence punishable under : SEC.314. of INDIAN PENAL CODE,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾಃ ಉದಯಶಂಕರ .ಹೆಚ್.ಜಿ. | ಪ್ರಾ.ಸಾ.- 07 |
| ತಂದೆಯ ಹೆಸರು | ಃ | ಗಣೇಶ್ ರಾಜ್ | ಚಾ.ಸಾ.- 14 |
| ವಯಸ್ಸು | ಃ | 54 ವರ್ಷ | |
| ಉದ್ಯೋಗ | ಃ | ವೈದ್ಯರು, ಪ್ರಶಮನಿ ಆಸ್ಪತ್ರೆ, ಕೊಪ್ಪ | |
| ವಾಸ ಸ್ಥಳ | ಃ | ಕೊಪ್ಪ | |

**ದಿನಾಂಕಃ 23-11-2022**

**ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. 2007 ನೇ ಇಸ್ವಿಯಿಂದ ನಾನುಕೊಪ್ಪದ ಪ್ರಶಮನಿ ಆಸ್ಪತ್ರೆಯಲ್ಲಿ Ultra sonalagist ಮೂಳೆ ರೋಗ ತಜ್ಞ ಎಂದು ಕೆಲಸ ಮಾಡುತ್ತಿದ್ದೇನೆ.

2. ಕೊಪ್ಪದ ಸರ್ಕಾರಿ ಆಸ್ಪತ್ರೆಯಿಂದ ದಿನಾಂಕಃ 14-02-2019 ರಂದು ಡಾಃ ಶಿವಕುಮಾರ್ ಎನ್ನುವ ವೈದ್ಯರು ನಾಗರತ್ನ ಎನ್ನುವ ಗರ್ಭಿಣಿಯನ್ನು ಸ್ಕ್ಯಾನಿಂಗ್ ಗಾಗಿ ರೆಫರ್ ಮಾಡಿದ್ದರು ( ಈ ದಿನ ನಾನು reference letter ನ ಅಸಲು ಪ್ರತಿಯನ್ನು ತಂದಿದ್ದೇನೆ ಎಂದು ಸಾಕ್ಷಿದಾರರು ಹೇಳಿರುತ್ತಾರೆ. ಇದರ ಟ್ರೂ ಕಾಪಿ ರೆಕಾರ್ಡಿನಲ್ಲಿ ಇರುತ್ತದೆ, ಆರೋಪಿ ಪರ ವಕೀಲರಾದ ಶ್ರೀ ಐ ಎಸ್ ಟಿ ವಕೀಲರು ಅಸಲು ಪ್ರತಿಯನ್ನು ಗುರುತಿಸಲು ತಮ್ಮ ತಕರಾರೇನು ಇಲ್ಲ ಎಂದು ಹೇಳಿರುತ್ತಾರೆ). ಅಸಲು reference letter ನ್ನು ನಿ.ಪಿ. 10 ಎಂದು ಗುರುತಿಸಲಾಯಿತು. ಅದರ ಟ್ರೂ ಕಾಪಿಯನ್ನು ನಿ.ಪಿ. 11 ಎಂದು, ನಕಲನ್ನು certify ಮಾಡಿರುವ ಬಗ್ಗೆ ಇರುವ ಸಹಿ ನನ್ನದೇ, ಸಾಕ್ಷಿದಾರರ ಸಹಿಯನ್ನು ನಿ.ಪಿ. 11(ಎ) ಎಂದು ಗುರುತಿಸಲಾಯಿತು.

3. ದಿನಾಂಕಃ 15-02-2019 ರಂದು ನಾಗರತ್ನ ಎನ್ನುವ ಗರ್ಭಿಣಿ ಸ್ತ್ರೀಯನ್ನು ಸ್ಕ್ಯಾನಿಂಗ್ ಗೆ ಒಳಪಡಿಸಿದೆನು, 15 ವಾರ 2 ದಿನಗಳ ಗರ್ಭಿಣಿ ಎಂದು ಸ್ಕ್ಯಾನಿಂಗ್ ನಲ್ಲಿ ಕಂಡು ಬಂದಿತು. ಆ ಸ್ಕ್ಯಾನಿಂಗ್ ರಿಪೋರ್ಟಿನ ಅಸಲು ಪ್ರತಿಯನ್ನು ಈ ದಿನ ತಂದಿದ್ದೇನೆ (ಅದರ ಟ್ರೂ ಕಾಪಿ ಈಗಾಗಲೇ ರೆಕಾರ್ಡಿನಲ್ಲಿ ಇರುತ್ತದೆ, ಶ್ರೀ ಐ ಎಸ್ ಟಿ ವಕೀಲರು ಅಸಲು ಪ್ರತಿಯನ್ನು ಗುರುತಿಸಲು ತಕರಾರೇನು ಇಲ್ಲ ಎಂದು ಹೇಳಿರುತ್ತಾರೆ.) ಅಸಲು ಸ್ಕ್ಯಾನಿಂಗ್ ರಿಪೋರ್ಟನ್ನು ನಿ.ಪಿ. 12 ಎಂದು (ಒಟ್ಟು 4 ಶೀಟ್ ಗಳು ಇವೆ), ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ನಿ.ಪಿ.12 ರ ಟ್ರೂ ಕಾಪಿಯನ್ನು ನಿ.ಪಿ.13 (ಒಟ್ಟು 4 ಶೀಟ್ ಗಳು ಇವೆ) ಎಂದು ಗುರುತಿಸಲಾಯಿತು.

4. ಸ್ಕ್ಯಾನಿಂಗ್ ರಿಪೋರ್ಟಿನ ಆಧಾರದ ಮೇಲೆ ನಾಗರತ್ನ ಅವರು 15 ವಾರ 2 ದಿನಗಳ ಗರ್ಭಿಣಿ ಎಂದು ಕೊನೆಯ ಪುಟದಲ್ಲಿ ನನ್ನ ಅಭಿಪ್ರಾಯವನ್ನು ಕಾಣಿಸಿದ್ದೇನೆ. ನಾಗರತ್ನ ಅವರನ್ನು ಸ್ಕ್ಯಾನಿಂಗ್‌ಗೆ ಈ ಮೊದಲು ಒಳಪಡಿಸಿದ ಬಗ್ಗೆ ದಾಖಲೆಗಳನ್ನು

ನೀಡಬೇಕೆಂದು ತನಿಖಾಧಿಕಾರಿ ನನಗೆ ಕೊಟ್ಟ ಮನವಿ ಪತ್ರ ಇದೇ ಇರುತ್ತದೆ, ಅದನ್ನು ನಿ.ಪಿ. 14 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ : ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

5. ಯಾವುದೇ ಆಸ್ಪತ್ರೆಯಿಂದ ನಿಮ್ಮ ಆಸ್ಪತ್ರೆಗೆ refer ಆದರೆ ಆ reference letter ನ್ನುಯಾವ ಆಸ್ಪತ್ರೆಯಿಂದ refer ಆಗಿರುತ್ತದೋ ಅದರ letter head ನಲ್ಲಿ ಕೊಡುತ್ತಾರೆ, ಅದಕ್ಕೆ ವೈದ್ಯರ ಸಹಿ ಮತ್ತು ಸೀಲ್ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು, ಮುಂದುವರಿದು ಕೆಲವೊಂದು diagnostic center ಗಳಿಂದ, patient ಗೆ ಅನುಕೂಲವಾಗಲಿ ಎಂದು ವೈದ್ಯರು busy ಇದ್ದಾಗ diagnostic center ನಿಂದಲೇ reference letter ನ್ನು ನಮಗೆ ಕಳುಹಿಸುತ್ತಾರೆ ಎಂದು ಹೇಳಿರುತ್ತಾರೆ.

6. ನಿ.ಪಿ.10 ರ reference letter ನ್ನು ನಮ್ಮ ಆಸ್ಪತ್ರೆಯಿಂದಲೇ ಕೊಟ್ಟದ್ದು ಎನ್ನುವುದು ಸರಿ.

7. ಸ್ಕ್ಯಾನಿಂಗ್ ಮಾಡುವ ಉದ್ದೇಶ ಏನಾದರೂ ತೊಂದರೆ ಇದ್ದರೆ ಕಂಡು ಹಿಡಿಯುವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು, ಮುಂದುವರಿದು ಮಗು ಜೀವಂತವಾಗಿದೆಯೇ ಎನ್ನುವ ಬಗ್ಗೆಯೂ ಸಹಾ ಎಂದು ಹೇಳಿರುತ್ತಾರೆ. ಯಾವುದೇ abnormalities ಸ್ಕ್ಯಾನಿಂಗ್ ಪ್ರಕಾರ ಇರಲಿಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ  ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-23-11-2022**

**(ಶುಭ ಗೌಡರ್)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS